

ಊರ ಹೊರಗೆ ಪಾಳುಬಿದ್ದಿದ್ದ ಮನೆಯೊಂದರಲ್ಲಿ ವಾಸವಾಗಿದ್ದರು.

ಒಂದು ದಿನ ಅವರು ಭಿಕ್ಷೆ ಬೇಡಿ ತಂದ ಅಕ್ಕಿಯಿಂದ ಅನ್ನ ಮಾಡಲು ತಯಾರಾದರು. ಒಬ್ಬೊಬ್ಬರು ಒಂದೊಂದು ಕೆಲಸವನ್ನು ಹಂಚಿಕೊಂಡರು. ಒಬ್ಬ ಅಡುಗೆ ಮಾಡಲು ಕಟ್ಟಿಗೆ ತರುವುದು, ಇನ್ನೊಬ್ಬ ನೀರು ತರುವುದು, ಮತ್ತೊಬ್ಬ ಅಡುಗೆ ಮಾಡುವುದೆಂದು ಕೆಲಸವನ್ನು ಹಂಚಿಕೊಂಡರು. ಅದರಂತೆ ಎಲ್ಲರೂ ತಂತಮ್ಮ ಕೆಲಸ ಮಾಡಿ ಮುಗಿಸಿದರು. ಅನ್ನವೇನೋ ಸಿದ್ಧವಾಯಿತು. ಆದರೆ, ಸಮಾಧಾನದಿಂದ ಕೂತು ಉಣ್ಣುವುದನ್ನು ಬಿಟ್ಟು ಜಗಳ ಆರಂಭಿಸಿದರು.

ಅವರಲ್ಲೊಬ್ಬ, 'ಅನ್ನವನ್ನು ನಾನು ಮಾಡಿದ್ದೇನೆ. ನನಗೇ ಹೆಚ್ಚು ಅನ್ನ ಬೇಕು' ಎಂದು ಹೇಳಿದ. ಎರಡನೆಯವನು, 'ನಾನು ದೂರದಿಂದ ನೀರು ಹೊತ್ತು ತಂದಿದ್ದೇನೆ. ನನಗೇ ಹೆಚ್ಚು ಅನ್ನ ಸಿಗಬೇಕು' ಎಂದು ವಾದಿಸಿದ. ಮೂರನೆಯವನು, 'ಏನಿಲ್ಲ, ನಾನು ಬಹಳ ಕಷ್ಟಪಟ್ಟು ಕಟ್ಟಿಗೆಯನ್ನು ತಂದಿದ್ದೇನೆ. ನನಗೇ ಹೆಚ್ಚು ಅನ್ನ ಸಲ್ಲಬೇಕು' ಎಂದು ಪಟ್ಟು ಹಿಡಿದ. ಅವರವರಲ್ಲೇ ಕಿತ್ತಾಟ ಶುರುವಾಯಿತು. ಆಗ ಮೂವರೂ ಒಂದು ನಿರ್ಧಾರಕ್ಕೆ ಬಂದರು. ಮೂವರಲ್ಲಿ ಯಾರು ಮೊದಲು ಮಾತನಾಡುತ್ತಾರೋ ಅವರು ಸೋತ ಹಾಗೆ. ಹಾಗೆ ಸೋತವನಿಗೆ ಕಡಿಮೆ ಅನ್ನ ನೀಡಬೇಕು ಎಂದು ತೀರ್ಮಾನಿಸಿದರು. ಕೂಡಲೆ ಮೂವರೂ ಅಡುಗೆಮನೆಯ ಪಕ್ಕದಲ್ಲಿದ್ದ ಚಿಕ್ಕ ಹಜಾರದಲ್ಲಿ ಕಣ್ಣು ಮುಚ್ಚಿ ಕುಳಿತುಕೊಂಡರು. ಎಷ್ಟು ಹೊತ್ತಾದರೂ ಯಾರೂ ಮಾತನಾಡುವ ಸಾಹಸಕ್ಕೆ ಹೋಗಲಿಲ್ಲ.

ಆ ಊರಿನಲ್ಲಿ ನಾಯಿಗಳ ಹಾವಳಿ ಹೆಚ್ಚಾಗಿತ್ತು. ಅದೇ ಸಮಯಕ್ಕೆ ಭಿಕ್ಷುಕರಿದ್ದ ಆ ಮನೆಯ ಹತ್ತಿರ ಬಂದ ಎರಡು ನಾಯಿಗಳು ಅನ್ನದ ವಾಸನೆ ಗ್ರಹಿಸಿ ಅಡುಗೆ ಮನೆಯತ್ತ ಬಂದವು. ಕಣ್ಣು ಮುಚ್ಚಿ ಮೌನವಾಗಿ ಕುಳಿತಿದ್ದ ಭಿಕ್ಷುಕರನ್ನು ನೋಡಿದ ಆ ನಾಯಿಗಳು ನಿಧಾನಕ್ಕೆ ಅಡುಗೆ ಮನೆಯಲ್ಲಿದ್ದ ಅನ್ನದ ಪಾತ್ರೆಯ ಹತ್ತಿರ ಹೋದವು. ಅವರಲ್ಲಿ ಯಾರೂ ಕಣ್ಣುಬಿಟ್ಟು ನೋಡಲಿಲ್ಲ. ನಾಯಿಗಳು ಎಲ್ಲ ಅನ್ನವನ್ನು ತಿಂದು ಹೊರಟು ಹೋಗುವಾಗ ಸ್ವಲ್ಪ ಶಬ್ದ ಉಂಟಾಗಿ ಕಣ್ಣು ಬಿಟ್ಟು ನೋಡಿದ ಭಿಕ್ಷುಕರಿಗೆ ಏನು ಮಾಡಬೇಕೆಂದೇ ಗೊತ್ತಾಗಲಿಲ್ಲ. ಮೂವರೂ, 'ಅಯ್ಯೋ ದೇವರೇ, ನಮ್ಮ ಮೂರ್ಖತನದಿಂದ ಕಷ್ಟಪಟ್ಟು ಮಾಡಿದ ಅನ್ನ ನಾಯಿಗಳ ಪಾಲಾಯಿತಲ್ಲ. ಕೈಗೆ ಬಂದದ್ದು ಬಾಯಿಗೆ ಬರದಂತೆ ಆಯಿತು' ಎಂದುಕೊಂಡು ಸಂಕಟ ಪಡುತ್ತ ಮತ್ತೆ ಭಿಕ್ಷಾಪಾತ್ರೆಗಳನ್ನು ಹಿಡಿದುಕೊಂಡು ಭಿಕ್ಷೆ ಬೇಡಲು ಹೊರಟರು.